ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಬಾಳೆ ಬೆಳೆಯಲ್ಲಿ ಗುಣಮಟ್ಟದ ಇಳುವರಿಗಾಗಿ ಬಾಳೆ ಸ್ಪೆಷಲ್ ಬಳಕೆ

ನಮ್ಮ ದೇಶದಲ್ಲಿ ಬಾಳೆ, ಮಾವಿನ ನಂತರದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಉತ್ಪಾದನೆ ಮತ್ತು ಇಳುವರಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಪ್ರತಿಯೊಬ್ಬರೂ ತಿನ್ನಲು ಬಯಸುವ ಬಾಳೆಹಣ್ಣು ಕೆಲ ಖನಿಜಾಂಶಗಳು ಹಾಗೂ ಜೀವಸತ್ವಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ. ಈ ಹಣ್ಣಿನಲ್ಲಿ ಖನಿಜಾಂಶಗಳು ಜೀವಸತ್ವಗಳು ಮತ್ತು ಶೇ. 27ರಷ್ಟು ಶರ್ಕರಪಿಷ್ಟವನ್ನು ಹೊಂದಿದ್ದು, ಶಕ್ತಿಯ ಆಗರವಾಗಿದೆ. ಬಾಳೆ ಹಣ್ಣು ಜನರಿಗೆ ಕೈಗೆಟುಕುವ ಬೆಲೆಯಲ್ಲಿ ವರ್ಷಪೂರ್ತಿ ಸಿಗುವ ಹಣ್ಣಾಗಿದ್ದು, ಪ್ರತಿಯೊಬ್ಬರು ತಿನ್ನಲು ಬಯಸುತ್ತಾರೆ.

ಅಧಿಕ ಲಾಭ ಹಾಗೂ ಸುಸ್ಥಿರ ಕೃಷಿಗೆ ಶಿಫಾರಸ್ಸಿನ ಪ್ರಮಾಣದಲ್ಲಿ ಸಾವಯವ ಗೊಬ್ಬರಗಳು ಮತ್ತು ರಾಸಾಯನಿಕ ಗೊಬ್ಬರಗಳನ್ನು ಬಳಸುವುದು ಅನಿವಾರ್ಯವೆನಿಸುತ್ತದೆ. ಅತ್ಯಧಿಕ ಇಳುವರಿ ಪಡೆಯಲು ಅಸಮರ್ಪಕ ರಸಗೊಬ್ಬರಗಳ ನಿರ್ವಹಣೆಯು ಪ್ರಮುಖ ತೊಂದರೆಯಾಗಿ ಪರಿಣಮಿಸಿದೆ.

ಬಾಳೆ ಸಸಿಯ ಪೋಷಕಾಂಶಗಳ ಬೇಡಿಕೆಯು ಅತ್ಯಧಿಕ ಪ್ರಮಾಣದಲ್ಲಿರುವಾಗ ನಿಗದಿತ ಸಮಯ ಮತ್ತು ಸೂಕ್ತ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ನೀಡುವುದು ಸಮರ್ಪಕ ಬಳಕೆಯ ಮೂಲವಾಗಿದೆ. ಸಾಮಾನ್ಯವಾಗಿ ರೈತರು ಬಾಳೆಯ ಸಸಿಯ ಬುಡದಲ್ಲಿ ರಸಗೊಬ್ಬರಗಳನ್ನು ನೆಲದ ಮೇಲ್ಮೈಯಲ್ಲಿ ಎರಚುತ್ತಾರೆ ಅಥವಾ ಹರಡುತ್ತಾರೆ. ಇದರಿಂದ ಹಾಕಲ್ಪಟ್ಟ ರಸಗೊಬ್ಬರವು ಹೆಚ್ಚು ಬೇರುಗಳಿಲ್ಲದ ಜಾಗದಲ್ಲಿ ಅನಾವಶ್ಯಕವಾಗಿ ಸೇರಿ ಅನಿಲ ರೂಪದಲ್ಲಿ ಆವಿಯಾಗಿ ಮತ್ತು ನೀರಿನೊಡನೆ ಕರಗಿ ಬಸಿದು ಹೋಗಿ ಪೋಲಾಗುವುದಲ್ಲದೆ. ಮಣ್ಣಿನೊಡನೆ ರಾಸಾಯನಿಕವಾಗಿ ಸಂಯೋಗಗೊಂಡು ಬೆಳೆಗೆ ಬೇಕಾದಾಗ ದೊರಕುವುದಿಲ್ಲ. ಇದರಿಂದ ವಾತಾವರಣ ಕಲುಷಿತಗೊಳ್ಳುತ್ತದಲ್ಲದೆ ಬಳಸಿದ ರಸಗೊಬ್ಬರಗಳು ಪರಿಣಾಮಕಾರಿಯಾಗಿ ಬಳಕೆಯಾಗುವುದಿಲ್ಲ.

ಅಧಿಕ ಹಾಗೂ ಉತ್ತಮ ಗುಣಮಟ್ಟದ ಇಳುವರಿಗೆ ಪೋಷಕಾಂಶಗಳ ಪಾತ್ರ ಮಹತ್ವದಾಗಿದೆ. ಇವುಗಳ ಅವಶ್ಯಕತೆ ಬಾಳೆಯ ಬೆಳವಣಿಗೆಯ ಹಂತದಿಂದಿಡಿದು ಗೊನೆ ಬಿಡುವ ಹಂತದವರೆಗೂ ಇರುತ್ತದೆ. ಬಹುತೇಕ ರೈತರು ಮುಖ್ಯ ಪೋಷಕಾಂಶದ ಬಗ್ಗೆಯೇ ಹೆಚ್ಚು ಗಮನ ಹರಿಸುತ್ತಾರೆ ಮತ್ತು ಲಘು ಪೋಷಕಾಂಶಗಳ ಬಗ್ಗೆ ಹೆಚ್ಚು ಗಮನ ಹರಿಸುವುದಿಲ್ಲ ಆದರೆ ಇಳುವರಿ, ಗುಣಮಟ್ಟದ ವಿಷಯದಲ್ಲಿ ಮತ್ತು ಬೆಳೆಯ ಇಳುವರಿಯನ್ನು ನಿಯಂತ್ರಿಸುವಲ್ಲಿ ಲಘು ಪೋಷಕಾಂಶಗಳು ಪ್ರಮುಖ ಪಾತ್ರ ವಹಿಸುತ್ತದೆ. ಇವುಗಳ ಪೂರೈಕೆಗೆ ಸೂಕ್ತ ಮಾರ್ಗವೆಂದರೆ ಬಾಳೆಯಲ್ಲಿ "ಬಾಳೆ ಸ್ಪೆಷಲ್" ಎಂಬ ಲಘು ಪೋಷಕಾಂಶದ ಬಳಕೆ.

"ಬಾಳೆ ಸ್ಪೆಷಲ್ (ಬನಾನ ಸ್ಪೆಷಲ್)" ಲಘು ಪೋಷಕಾಂಶಗಳ ಮಿಶ್ರಣವಾಗಿದ್ದು (ಸತು, ತಾಮ್ರ ಮತ್ತು ಬೋರಾನ್) ಇದನ್ನು ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಅಭಿವೃದ್ಧಿ ಪಡಿಸಿರುತ್ತಾರೆ. ಸಸ್ಯಗಳು ಕೇವಲ ಬೇರಿನ ಮೂಲಕವಲ್ಲದೇ ಎಲೆ ಹಾಗೂ ಸಸ್ಯದ ಇತರೆ ಭಾಗಗಳಿಂದಲೂ ಸಹ ಪೋಷಕಾಂಶಗಳನ್ನು ಹೀರಿಕೊಂಡು ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತವೆ ಎಂಬ ಹೆಚ್ಚಿನ ಅರಿವನ್ನು ಮೂಡಿಸಲು ಸಸ್ಯದ ಎಲೆಗಳಿಗೆ ಸಿಂಪರಣೆ ಮೂಲಕ ಪೋಷಕಾಂಶಗಳನ್ನು ದೊರಕಿಸಿಕೊಟ್ಟು ಅಧಿಕ ಹಾಗೂ ಉತ್ತಮ ಗುಣಮಟ್ಟದ ಇಳುವರಿಯನ್ನು ಪಡೆಯಲು ಸಾಧ್ಯವೆಂದು ಸಂಸ್ಥೆ ಸುಮಾರು 15 ವರ್ಷಗಳ ಸತತ ಸಂಶೋಧನೆಯಿಂದ ದೃಢಪಡಿಸಿದೆ.

ಬಾಳೆ ಸಸಿಗಳನ್ನು ನಾಟಿ ಮಾಡಿ ಹೂವು, ಗೊನೆ ಬರುವವರೆಗೂ ರಸಗೊಬ್ಬರದ ಮೂಲಕ ಪೋಷಕಾಂಶಗಳನ್ನು ಮೂರು ಹಂತಗಳಲ್ಲಿ ನೀಡಿ ನಂತರ ಕೊಯ್ಲು ಬರುವವರೆಗೂ ಸೂಕ್ತ ಪೋಷಕಾಂಶಗಳ ಬಗ್ಗೆ ರೈತರು ಹೆಚ್ಚಿನ ಗಮನವಹಿಸುವುದಿಲ್ಲ. ಸಸ್ಯದಲ್ಲಿ ಹುದುಗಿದ ಸುಪ್ತ ಹಸಿವನ್ನು ಈ ಹಂತದಲ್ಲಿ ನೀಗಿಸುವುದರಿಂದ ಹೆಚ್ಚಿನ ಗುಣಮಟ್ಟದ ಫಸಲು ಹಾಗೂ ಅಧಿಕ ಇಳುವರಿಯನ್ನು ಪಡೆಯಲು ಸಾಧ್ಯ. ಈ ಕಾರಣಕ್ಕಾಗಿ "ಬಾಳೆ ಸ್ಪೆಷಲ್" ಮಿಶ್ರಣವನ್ನು ಸಿಂಪರಣೆ ಮಾಡುವುದು ಹೆಚ್ಚು ಲಾಭದಾಯಕ. ಈ ಮಿಶ್ರಣದ ಬಳಕೆ ರೈತರ ಕ್ಷೇತ್ರ ಮಟ್ಟದಲ್ಲಿ ಉತ್ತಮ ಫಲಿತಾಂಶ ನೀಡಿದೆ.

**ಸಿಂಪರಣಾ ಪ್ರಮಾಣ, ಸಮಯ ಮತ್ತು ವಿಧಾನ:** ಬಾಳೆಯ ಅಧಿಕ ಇಳುವರಿಗಾಗಿ 75 ಗ್ರಾಂ. ಬಾಳೆಯ ಸ್ಪೆಷಲ್ (ಪ್ರತಿ ಲೀ. ನೀರಿಗೆ 5.0 ಗ್ರಾಂ ನಂತೆ) 15 ಲೀ. ನೀರಿನಲ್ಲಿ ಕರಗಿಸಿ, ಇದಕ್ಕೆ 2 ಮಿ. ಲೀಟರ್ ಸಾಬೂನು ದ್ರಾವಣ ಅಥವಾ ಮಾರುಕಟ್ಟೆಯಲ್ಲಿ ದೊರೆಯುವ ಒಂದು ರೂಪಾಯಿ ಬೆಲೆಯ ಶ್ಯಾಂಪು ಪೊಟ್ಟಣ ದ್ರಾವಣವನ್ನು ಹಾಗೂ ಒಂದು ನಿಂಬೆ ಹಣ್ಣಿನ ರಸವನ್ನು ಒಟ್ಟಿಗೆ ಬೆರೆಸಬೇಕು. ಮೊದಲ ಸಿಂಪರಣೆ ಗಿಡ ನೆಟ್ಟ 5 ತಿಂಗಳ ನಂತರ, ತದನಂತರ 6, 7, 8 ಮತ್ತು 9ನೇ ತಿಂಗಳಲ್ಲಿ ಸಿಂಪಡಿಸಬೇಕು. ಒಟ್ಟಾರೆ ಪ್ರತಿ ಎಕರೆಗೆ 10 ಕಿ.ಗ್ರಾಂ ಬಾಳೆ ಸ್ಪೆಷಲ್ ಬೇಕಾಗುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org, kvkdk@rediffmail.com, 0824–2431872